ಪ್ರಬಂಧ




ಸುಧಾ ಆಡುಕಳ

ಕಲೆ: ಎಸ್. ವಿ. ಹೂಗಾರ್




# ಹೊಳೆಯೆಂಬ ಸಂಗಾತಿ

ಬಿಟ್ಟು ಬಂದ ಊರನ್ನು ಎಷ್ಟೊತ್ತಿಗೆ ಕಣ್ಮುಚ್ಚಿ ನೆನಪಿಸಿಕೊಂಡರೂ ನೆನಪಾಗುವ ಮೊದಲ ಸಂಗತಿಯೆಂದರೆ ನಮ್ಮೂರ ಹೊಳೆ. ಎರಡು ಬೆಟ್ಟಗಳ ನಡುವೆ ಸಿಕ್ಕಿಹಾಕಿಕೊಂಡಂತಿರುವ ನಮ್ಮೂರನ್ನು ಸರಿಯಾಗಿ ನಡುಮಧ್ಯದಲ್ಲಿ ಕತ್ತರಿಸಿದಂತೆ ಹರಿಯುವ ಹೊಳೆ ನಮ್ಮೊಂದಿಗೆ ಸದಾ ಹರಿಯುತ್ತಲೇ ಇರುತ್ತದೆ. ಯಾಕೆಂದರೆ ಬಾಲ್ಯಕಾಲದಲ್ಲಿ ನಮ್ಮ ಎಲ್ಲ ಚಟುವಟಿಕೆಗಳನ್ನೂ, ಚಲನೆಯನ್ನೂ ನಿಯಂತ್ರಿಸುತ್ತಿದ್ದುದು ಈ ಹೊಳೆಯೆ. ಹಳ್ಳಿಯಲ್ಲಿರುವ ಎಲ್ಲ ಜಾಗಗಳಂತೆ ಈ ಹೊಳೆಗೂ ಒಂದು ಪುರಾಣವಿತ್ತು. ದೂರದ ಬೆಟ್ಟದ ಮೇಲಿರುವ ಕಾನಮ್ಮನೂ, ನಮ್ಮೂರ ಸಿರಿದೇವಿ ದೇವಿಯಮ್ಮನೂ ಒಂದೇ ಕರುಳುಬಳ್ಳಿಯ ಕುಡಿಗಳಂತೆ. ಅಕ್ಕತಂಗಿಯರು ಆಗಾಗ ಇರುಳಲ್ಲಿ ಜನರಿಗೆ ಗೊತ್ತಾಗದಂತೆ ಒಬ್ಬರ ಮನೆಗೊಬ್ಬರು ಹೋಗಿಬರುವುದೂ ಇತ್ತಂತೆ. ಹಾಗೆ ಸಂಚರಿಸುವ ದೇವಿಯರ ಕಾಲ್ಗೆಜ್ಜೆಯ ಸದ್ದನ್ನು ಕೇಳಿದ್ದೇವೆಂದು ಸಾಕ್ಷ್ಯ ನುಡಿಯುವ ಹಿರಿಯರನೇಕರು ನಮ್ಮೂರಿನಲ್ಲಿದ್ದರು. ಊರಿನಲ್ಲಿ ಜನರ ಸಂಖ್ಯೆ ಹೆಚ್ಚಿದಂತೆ, ಕಾಡುಮೃಗಗಳೆಲ್ಲ ಊರಿನಲ್ಲಿ ಓಡಾಡುವುದು ಕಡಿಮೆಯಾದಂತೆ ರಾತ್ರಿಯೂ ಜನರ ಓಡಾಟ ಪ್ರಾರಂಭವಾಗಿ ದೇವಿಯರ ಚಲನವಲನಕ್ಕೆ ಭಂಗಬಂದಿತಂತೆ. ಹಾಗಾಗಿ, ದೇವಿಯರು ಒಬ್ಬರನ್ನೊಬ್ಬರು ಭೇಟಿಯಾಗಲು ಹುಟ್ಟುಹಾಕಿಕೊಂಡ ಜಲಮಾರ್ಗವೇ ನಮ್ಮೂರ ಹೊಳೆ ಎನ್ನುವುದು ಎಲ್ಲರ ಅಭಿಮತವಾಗಿತ್ತು.

